ದೂರವಾಣಿ/Phone: (O) :08254-230349
(Fax) : 08254 -232720
E-mail: *dcfknd@aranya.gov.in*
ಸ್ಥಳ: ಕುಂದಾಪುರ – 576201
Place: Kundapura - 576201

**ಕರ್ನಾಟಕ ಅರಣ್ಯ ಇಲಾಖೆ**

ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಕುಂದಾಪುರ ವಿಭಾಗ, ಕುಂದಾಪುರ – 576201

ಸಂಖ್ಯೆ:ಡಿಎಂಎನ್/ವಿವ.18/ಎಫ್ಎಲ್ಡಿ/2014-15 ದಿನಾಂಕ: 18-03-2016

**ಪರಿಷ್ಕೃತ ಬೇಡಿಕೆ ಪತ್ರ**

ಇವರಿಗೆ,

M/s. Padma Crushers,
C/o Padma Services,
Jodumarga Post – 574219,
Bantwala Taluk, Dakshina Kannada District.

ಮಾನ್ಯರೇ,

ವಿಷಯ: Diversion of 2.213 ha. (including 0.50 ha. of forest land already diverted & 0.433 ha. of safety zone area) of forest land in Sy. No. 78/1P of Padukonaje village, Marpady Reserve Forest, Mangalore taluk, Dakshina Kannada District, Kundapura Division for building stone material quarry in favour of M/s Padma Crushers, Bantwala Taluk, Dakshina Kannada District. (Online Proposal No. EP/KA/QRY/ 7549/2014)

ಉಲ್ಲೇಖ: 1) ಕೇಂದ್ರ ಸರ್ಕಾರದ ಆದೇಶ ಸಂಖ್ಯೆ ಎಫ್.ನಂ.4- ಕೆಆರ್‌ಬಿ.551 /2008 ಬೆಂಗಳೂರು/7828 ದಿನಾಂಕ: 31-12-2015.

2) ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು), ಬೆಂಗಳೂರು ಇವರ ಸಂ. ಎ5(2)/ಕ್ಯೂಆರ್‌ವೈ/ ಸಿಆರ್. 10/2014-15 ದಿನಾಂಕ: 07-01-2016

3) ಈ ಕಛೇರಿಯ ಪತ್ರ ಸಮ ಸಂಖ್ಯೆ ದಿನಾಂಕ: 30-01-2016.

4) ನೋಡಲ್ ಅಧಿಕಾರಿ ಹಾಗೂ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಸಂರಕ್ಷಣೆ, ಬೆಂಗಳೂರು ಇವರ ಈ-ಮೇಲ್ ಸಂದೇಶ.

5) ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಮೂಡಬಿದ್ರೆ ಉಪವಿಭಾಗ, ಮೂಡಬಿದ್ರೆ ಇವರ ಪತ್ರ ಸಂಖ್ಯೆ.129/ಕೆಲ್ಲುಗಣಿ/2015-16 ದಿ: 16-03-2016.

* * * * * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ನಿಮ್ಮಲ್ಲಿ ತಿಳಿಸುವುದೇನೆಂದರೆ ಮಂಗಳೂರು ತಾಲ್ಲೂಕು, ಪಡುಕೋಣಾಜೆ ಗ್ರಾಮದ ಸರ್ವೆ ನಂಬ್ರ 78/1ಪಿ ರ ಮಾರ್ಪಾಡಿ ಮೀಸಲು ಅರಣ್ಯದಲ್ಲಿ ಅರಣ್ಯ (ಸಂರಕ್ಷಣಾ) ಕಾಯ್ದೆ 1980ರಂತೆ **ಈಗಾಗಲೆ ಬಿಡುಗಡೆಗೊಳಿಸಿದ 0.50ಹೆ ಮತ್ತು ಸೇಫ್ಟಿ ಝೋನ್ ಪ್ರದೇಶ 0.433ಹೆ. ಸೇರಿ ಒಟ್ಟು 2.213ಹೆ.** ಅರಣ್ಯ ಭೂಮಿಯನ್ನು ಈ ಹಿಂದೆ ಬಿಡುಗಡೆಗೊಳಿಸಲು ಆದೇಶಿಸಿದ ದಿನಾಂಕದಿಂದ ಅಂದರೆ **ದಿನಾಂಕ: 02-11-2010 ರಿಂದ 10 ವರ್ಷಗಳ ಅವಧಿಗೆ ಲೀಸ್** ಮೂಲಕ ಬಿಡುಗಡೆಗೊಳಿಸುವ ಕುರಿತಂತೆ ಕೇಂದ್ರ ಸರಕಾರದ ಉಲ್ಲೇಖ (1)ರ ಪತ್ರದಲ್ಲಿ ತಾತ್ವಿಕ (Stage-1) ಅನುಮೋದನೆಯನ್ನು ನೀಡಲಾಗಿದೆ. ಈ ಕಛೇರಿಯಿಂದ ಉಲ್ಲೇಖ (3)ರಂತೆ ನೀಡಲಾದ ಬೇಡಿಕೆ ಪತ್ರವಲ್ಲಿ ಬಿಟ್ಟು ಹೋಗಿರುವ ಕೆಲವೊಂದು ವೆಚ್ಚಗಳನ್ನು ಸೇರಿಸಿ ಪರಿಷ್ಕೃತ ಬೇಡಿಕೆ ಪತ್ರ ನೀಡಲು ನೋಡಲ್ ಅಧಿಕಾರಿ ಹಾಗೂ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಸಂರಕ್ಷಣೆ, ಬೆಂಗಳೂರುರವರು ಈ-ಮೇಲ್ ಸಂದೇಶದಲ್ಲಿ ತಿಳಿಸಿರುತ್ತಾರೆ. ಅದರಂತೆ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಮೂಡಬಿದ್ರೆರವರು ಈ ಕೆಳಗಿನಂತೆ ವರದಿ ನೀಡಿರುತ್ತಾರೆ.

1) ಕೇಂದ್ರ ಸರಕಾರದ ಷರತ್ತು ಸಂಖ್ಯೆ 16: ಉಪಯೋಗಿ ಸಂಸ್ಥೆಯವರು ಈಗಾಗಲೇ 20 ಮೀಟರಿಗೊಂದು 4 ಫೀಟ್ ಎತ್ತರದ ಆರ್.ಸಿ.ಸಿ ಕಂಬವನ್ನು ಬಿಡುಗಡೆಗೆ ಪ್ರಸ್ತಾಪಿಸಿದ ಪ್ರದೇಶದಲ್ಲಿ ಅವರ ವೆಚ್ಚದಲ್ಲಿ ಸಾಧ್ಯವಾದಲ್ಲಿ ಅಳವಡಿಸಿರುತ್ತಾರೆ ಹಾಗೂ ಸೇಫ್ಟೀ ಜೋನ್ ಸುತ್ತಲೂ ತಂತಿ ಬೇಲಿಯನ್ನು ಉಪಯೋಗಿ ಸಂಸ್ಥೆಯವರ ವೆಚ್ಚದಲ್ಲಿ ನಿರ್ಮಿಸಿರುತ್ತಾರೆ. ಇದರಿಂದಾಗಿ ಪ್ರಸ್ತಾವಿತ ಪ್ರದೇಶದ ಗಡಿಗುರುತುಗಳು ಸ್ಪಷ್ಟವಾಗಿರುತ್ತವೆ.

..2/-

2) ಷರತ್ತು ಸಂಖ್ಯೆ 18: ಮೇಲಿನ ಪ್ರಸ್ತಾವಿತ ಪ್ರದೇಶದ ಸೇಫ್ಟಿ ಜೋನ್ ಪ್ರದೇಶ 0.433ಹೆ. ಪ್ರದೇಶವು ಕಲ್ಲು ಬಂಡೆ ಪ್ರದೇಶವಾಗಿದ್ದು, ಇದರಲ್ಲಿ ಹಸುರೀಕರಣ ಮಾಡಲು ಸಾಧ್ಯ ಇರುವುದಿಲ್ಲ.

3) ಷರತ್ತು ಸಂಖ್ಯೆ 19: ಪ್ರಸ್ತಾವಿತ ಸ್ಥಳದ ಸೇಫ್ಟಿ ಜೋನ್ ಪ್ರದೇಶವು 0.433ಹೆ. ಪ್ರದೇಶವಾಗಿದ್ದು, ಇದರ $1^1/_2$ ಪಾಲು ಪ್ರದೇಶವು 0.649ಹೆ. ಪ್ರದೇಶದಲ್ಲಿ ಅರಣ್ಯೀಕರಣಕ್ಕೆ ತಗಲುವ ವೆಚ್ಚ ರೂ.1.52 ಲಕ್ಷ ಪಡೆಯಬಹುದಾಗಿದೆ.

4) ಷರತ್ತು ಸಂಖ್ಯೆ 20 : ಕೇಂದ್ರ ಸರಕಾರವು ನೀಡಿದ ತಾತ್ವಿಕ (Stage-1) ಅನುಮೋದನೆಯಂತೆ ಉಪಯೋಗಿ ಸಂಸ್ಥೆಯವರಿಗೆ ಗುತ್ತಿಗೆಗೆ ಮಂಜೂರಾಗಿರುವ ಜಮೀನಿನ 100 ಮೀಟರ್ ದೂರದಲ್ಲಿ ಮಾರ್ಪಾಡಿ ಬ್ಲಾಕ್ ಅರಣ್ಯ ಪ್ರದೇಶದಲ್ಲಿ ಮಣ್ಣು ತೇವಾಂಶ ರಕ್ಷಣಾ ಕಾರ್ಯ ಮತ್ತು ಗ್ಯಾಪ್ ನೆಡುತೋಪು ಬೆಳೆಸುವ ಕಾಮಗಾರಿಯನ್ನು ಉಪಯೋಗಿ ಸಂಸ್ಥೆಯವರ ವೆಚ್ಚದಲ್ಲಿ ಮಾಡಬಹುದಾಗಿದ್ದು, ಈ ಬಗ್ಗೆ ಉಪಯೋಗಿ ಸಂಸ್ಥೆಯವರಿಂದ ಲಿಖಿತ ಒಪ್ಪಿಗೆ ಪತ್ರವನ್ನು ಪಡೆಯಬಹುದಾಗಿರುತ್ತದೆ.

ಆದ ಕಾರಣ ಕೇಂದ್ರ ಸರಕಾರದ ತಾತ್ವಿಕ (Stage-1) ಅನುಮೋದನೆಯಂತೆ ನೀವು ಈ ಕೆಳಗಿನ ಮೊತ್ತವನ್ನು ಪಾವತಿಸಬೇಕಾಗಿರುತ್ತದೆ.

| ಕ್ರ. ಸಂ | ವಿವರ | ಪರಿಮಾಣ (ಹೆ.ಗಳಲ್ಲಿ) | ಘಟಕ ದರ (ಲಕ್ಷಗಳಲ್ಲಿ) | ಮೊಬಲಗು (ಲಕ್ಷಗಳಲ್ಲಿ) |
|---|---|---|---|---|
| 01 | ಮಂಜೂರಾದ ಒಟ್ಟು 2.213ಹೆ. ಅರಣ್ಯ ಪ್ರದೇಶಕ್ಕೆ ಪಾವತಿಸಬೇಕಾದ ನಿವ್ವಳ ಮೌಲ್ಯ (ಎನ್.ಪಿ.ವಿ) | 2.213 | 7.30 | 16.1549 |
| | ಈ ಪೈಕಿ ಹಿಂದೆ ಮಂಜೂರಾದ 0.50ಹೆ. ಅರಣ್ಯ ಭೂಮಿಗೆ ಪಾವತಿಸಿದ ನಿವ್ವಳ ಮೌಲ್ಯ (ಎನ್.ಪಿ.ವಿ) | 0.50 | 6.26 | 3.13 |
| | **ಪ್ರಸ್ತುತ ಪಾವತಿಸಬೇಕಾದ ನಿವ್ವಳ ಮೌಲ್ಯ (ಎನ್.ಪಿ.ವಿ)** | | | **13.0249** |
| 02 | ಅರಣ್ಯೇತರ ಪ್ರದೇಶದಲ್ಲಿ ಪರಿಹಾರಾತ್ಮಕ ನೆಡುತೋಪು ಬೆಳೆಸುವ ವೆಚ್ಚ | 1.28 | 2.34 | 2.9952 |
| 03 | ಅನುಮೋದನೆ ಪಡೆಯದೇ ಉಪಯೋಗಿಸಿದ 1.28ಹೆ. ಅರಣ್ಯ ಪ್ರದೇಶದ ಎರಡರಷ್ಟು ಅಂದರೆ 2.56ಹೆ ಕ್ಷೀಣಿತ ಅರಣ್ಯ ಪ್ರದೇಶದಲ್ಲಿ ದಂಡನಾತ್ಮಕ ಪರಿಹಾರಾತ್ಮಕ ನೆಡುತೋಪು ಬೆಳೆಸುವ ವೆಚ್ಚ | 2.56 | 2.34 | 5.9904 |
| 04 | ತಾತ್ವಿಕ (Stage-1) ಅನುಮೋದನೆ ನೀಡುವ ಮೊದಲು 1.28ಹೆ. ಅರಣ್ಯ ಭೂಮಿ ಉಪಯೋಗಿಸಿದ ಬಗ್ಗೆ 80% ದಂಡನಾತ್ಮಕ ಎನ್.ಪಿ.ವಿ ಮೊತ್ತ | 1.28 | 7.30 | 7.4752 |
| 05 | ಪ್ರಸ್ತಾವಿತ ಪ್ರದೇಶದ ಸೇಫ್ಟೀ ಜೋನ್ ಪ್ರದೇಶವು 0.433ಹೆ. ಪ್ರದೇಶವಾಗಿದ್ದು, ಇದರ $1^1/_2$ ಪಾಲು ಅಂದರೆ 0.649ಹೆ. ಪ್ರದೇಶದಲ್ಲಿ ಅರಣ್ಯೀಕರಣಕ್ಕೆ ತಗಲುವ ವೆಚ್ಚ | 0.649 | 2.34 | 1.51866 |
| | ಒಟ್ಟು | | | **31.00436** |

ಅಲ್ಲದೇ ಕೇಂದ್ರ ಸರಕಾರದ ಷರತ್ತು ಸಂಖ್ಯೆ 16 ರಲ್ಲಿ ತಿಳಿಸಿದಂತೆ ಉಪಯೋಗಿ ಸಂಸ್ಥೆಯವರು ಬಿಡುಗಡೆಗೆ ಪ್ರಸ್ತಾಪಿಸಿದ ಪ್ರದೇಶದಲ್ಲಿ ಈಗಾಗಲೇ 20 ಮೀಟರಿಗೊಂದು 4 ಫೀಟ್ ಎತ್ತರದ ಆರ್.ಸಿ.ಸಿ ಕಂಬಗಳನ್ನು ಅವರ ವೆಚ್ಚದಲ್ಲಿ ಸಾಧ್ಯವಾದಲ್ಲಿ ಅಳವಡಿಸಿರುತ್ತಾರೆ ಹಾಗೂ ಸೇಫ್ಟೀ ಜೋನ್ ಸುತ್ತಲೂ ತಂತಿ ಬೇಲಿಯನ್ನು ಉಪಯೋಗಿ ಸಂಸ್ಥೆಯವರ ವೆಚ್ಚದಲ್ಲಿ ನಿರ್ಮಿಸಿರುವುದರಿಂದ ಈ ಉದ್ದೇಶಗಳಿಗೆ ಉಪಯೋಗಿ ಸಂಸ್ಥೆಯವರು ಹಣ ಭರಣ ಮಾಡುವ ಪ್ರಮೇಯ ಉದ್ಭವಿಸುವುದಿಲ್ಲ.

ಆದುದರಿಂದ ಮೇಲೆ ತಿಳಿಸಿದ ಕ್ರಮ ಸಂಖ್ಯೆ 01 ರಿಂದ 05ರವರೆಗಿನ ಉದ್ದೇಶಕ್ಕೆ **ಒಟ್ಟು ರೂ. 31,00,436/- (ಮೂವತ್ತೊಂದು ಲಕ್ಷದ ನಾಲ್ಕು ನೂರ ಮೂವತ್ತಾರು ಮಾತ್ರ)** ಮೊಬಲಗನ್ನು RTGS/NEFT ಮುಖಾಂತರ ಈ ಕೆಳಗಿನ ಯಾವುದಾದರೊಂದು CAMPA Account ಗೆ ಕೂಡಲೇ ಪಾವತಿಸಿ, ಪಾವತಿಸಿದ ಬಗ್ಗೆ ಬ್ಯಾಂಕ್‌ನ ದಾಖಲೆಗಳನ್ನು ಈ ಕಛೇರಿಗೆ ನೀಡಲು ತಿಳಿಸಿದೆ.

1) CAMPA A/c No. SB01025213, CAF Karnataka, Corporation Bank, CGO Complex, Lodhi Road, New Delhi-110003 (RTGS/IFSC No. CORP0000371) or
2) CAMPA A/c No. 344902010105 421-KARNATAKA CAMPA, Union Bank of India, Sunder Nagal, New Delhi 110003 (RTGS/IFSC No. UBIN0534498) through e-payment module of Forests Clearance portal-forestclearance.nic.in as directed therein.

..3/-

ಅಲ್ಲದೇ ಉಲ್ಲೇಖ (2)ರ ಕೇಂದ್ರ ಸರಕಾರದ ಆದೇಶದಲ್ಲಿ ತಿಳಿಸಿದಂತೆ ಈ ಕೆಳಗಿನ ಷರತ್ತುಗಳನ್ನು ಪಾಲಿಸಲು ಸಹ ತಿಳಿಸಿದೆ.

1) ಷರತ್ತು ಸಂಖ್ಯೆ 02 ಮತ್ತು 03 ರಲ್ಲಿ ತಿಳಿಸಿದಂತೆ ಪರಿಹಾರಾತ್ಮಕ ನೆಡುತೋಪು ಬೆಳೆಸಲು ಇಲಾಖೆಯ ಹೆಸರಿಗೆನೊಂದಣಿಮಾಡಲಾದ ಕಾರ್ಕಳ ತಾಲೂಕು ಕಬ್ಬಿನಾಲೆ ಗ್ರಾಮದ ಸರ್ವೆ ನಂಬ್ರ 68/8, 68/2, 68/1, 68/7, 68/6ಬಿ, 124/1ಬಿ ಮತ್ತು 1ಸಿ ಯಲ್ಲಿ ಒಟ್ಟು 4.40ಎಕ್ರೆ ಅರಣ್ಯೇತರ (ಪಟ್ಟಾ) ಭೂಮಿಯ ಗಡಿಗುರುತುಗಳನ್ನು ಗುರುತಿಸಿ ವಲಯ ಅರಣ್ಯ ಅಧಿಕಾರಿ, ಹೆಬ್ರಿ ಇವರಿಗೆ ಹಸ್ತಾಂತರಿಸಲು ತಿಳಿಸಿದೆ. ಹಾಗೂ ಇಲಾಖೆಯ ಹೆಸರಿಗೆ ಮ್ಯುಟೇಶನ್ ಮಾಡಿ, ಮ್ಯುಟೇಶನ್ ಪ್ರತಿ ಹಾಗೂ ಪಹಣಿ ಕಾಲಂ. 9ರಲ್ಲಿ ಅರಣ್ಯ ಇಲಾಖೆ ಎಂದು ನಮೂದಿಸಿದ ಪಹಣಿ ಪತ್ರವನ್ನು ಈ ಕಛೇರಿಗೆ ಒದಗಿಸಲು ತಿಳಿಸಿದೆ.

2) ಷರತ್ತು ಸಂಖ್ಯೆ 06 ಮತ್ತು 07 ರಲ್ಲಿ ತಿಳಿಸಿದಂತೆ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಅಂತಿಮ ಆದೇಶದಲ್ಲಿ ವಿಧಿಸುವ ಎನ್.ಪಿ.ವಿ/ಇತರ ಮೊಬಲಗನ್ನು ಪಾವತಿಸಲು ಬದ್ಧರಿರುವ ಬಗ್ಗೆ ರೂ. 100/- ರ ಛಾಪಾ ಕಾಗದಲ್ಲಿ ಮುಚ್ಚಳಿಕೆ ಪತ್ರವನ್ನು ಈ ಕಛೇರಿಗೆ ನೀಡಲು ತಿಳಿಸಿದೆ.

3) ಷರತ್ತು ಸಂಖ್ಯೆ 20ರಲ್ಲಿ ತಿಳಿಸಿದಂತೆ ಗುತ್ತಿಗೆಗೆ ಪ್ರಸ್ತಾಪಿಸಿದ ಜಮೀನಿನ 100 ಮೀಟರ್ ದೂರದಲ್ಲಿ ಮಾರ್ಪಾಡಿ ಬ್ಲಾಕ್ ಅರಣ್ಯ ಪ್ರದೇಶದಲ್ಲಿ ಮಣ್ಣು ತೇವಾಂಶ ರಕ್ಷಣಾ ಕಾರ್ಯ ಮತ್ತು ಗ್ಯಾಪ್ ನೆಡುತೋಪು ಬೆಳೆಸುವ ಕಾಮಗಾರಿಯನ್ನು ನಿಮ್ಮ ವೆಚ್ಚದಲ್ಲಿ ಮಾಡುವ ಬಗ್ಗೆ ಮುಚ್ಚಳಿಕೆ ಪತ್ರ ನೀಡಲು ತಿಳಿಸಿದೆ.

4) ಹಾಗೂ ಕೇಂದ್ರ ಸರಕಾರದ ಆದೇಶದಲ್ಲಿ ತಿಳಿಸಿದ ಉಳಿದ ಷರತ್ತುಗಳನ್ನು ಪಾಲಿಸಲು ಬದ್ಧರಿರುವ ಬಗ್ಗೆ ರೂ. 100/- ಮುಖಬೆಲೆಯ ಛಾಪಾ ಕಾಗದದಲ್ಲಿ ಮುಚ್ಚಳಿಕೆ ಬರೆದು ಸಲ್ಲಿಸಲು ತಿಳಿಸಿದೆ.

ಮೇಲೆ ತಿಳಿಸಿದ ಷರತ್ತುಗಳನ್ನು ಪಾಲಿಸಿದ ನಂತರವೇ ಕೇಂದ್ರ ಸರ್ಕಾರದ ಅಂತಿಮ (Stage-II) ಅನುಮೋದನೆ ಬಗ್ಗೆ ಸೂಕ್ತ ಪ್ರಸ್ತಾವನೆ ಸಲ್ಲಿಸಲು ಕ್ರಮ ಕೈಗೊಳ್ಳಲಾಗುವುದು. ಕೇಂದ್ರ ಸರ್ಕಾರದ ಅಂತಿಮ ಆದೇಶ (Stage-II) ಹಾಗೂ ರಾಜ್ಯ ಸರಕಾರದ ಆದೇಶ ಹಾಗೂ ಈ ಕಚೇರಿಯಿಂದ ನೀಡಲಾಗುವ ಆದೇಶದವರೆಗೆ ಸದ್ರಿ ಸ್ಥಳದಲ್ಲಿ ಯಾವುದೇ ಅರಣ್ಯೇತರ ಚಟುವಟಿಕೆಗಳನ್ನಾಗಲಿ ಅಥವಾ ಪ್ರದೇಶದಲ್ಲಿ ಅನಧಿಕೃತವಾಗಿ ಅತಿಕ್ರಮ ಪ್ರವೇಶ ಮಾಡುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಿದ್ದು, ಸದರಿ ನಿಬಂಧನೆಗಳನ್ನು ಪಾಲಿಸಲು ಕೋರಿದೆ.

ತಮ್ಮ ವಿಶ್ವಾಸಿ.

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಕುಂದಾಪುರ ವಿಭಾಗ, ಕುಂದಾಪುರ